(*c*) the recommendations of Pay Commission in this regard ;

(*d*) whether the Government intends to reserve some seats for the Graduate P.Cs. in the direct selection to the P.S.I. posts?

SRI R. GUNDU RAO (Chief Minister).—

(*a*) This is under examination before the Official Pay Committee.

(*b*) Does not arise in view of the reply to clause (*a*) above.

(*c*) The Pay Commission has not examined this aspect.

(*d*) There is no proposal before Government.

SRI B. B. SAYANAK.— Sir, may I know since when the matter relating to grant of advance increments to the Graduate P.Cs. is under examination of the Government?

† SRI R. GUNDU RAO.—This is before the Official Pay Committee. As soon as the report is made available to the Government it will be finalised.

New Universities at Mangalore and Gulbarga.

185 SRI H. GANGADHARAN (Krishnaraja) Will the Minister for Education be pleased to state .—

(*a*) whether the Government has made any efforts to start new universities at Mangalore and Gulbarga;

(*b*) if so, when they will come into existence;

(*c*) whether there are any representations to name them as Sri Manjunatha University, Sri Basaveswara University at Mangalore and Gulbarga respectively?

SRI G. B. SHANKAR RAO (Minister for Education).—

(*a*) Yes.

(*b*) It is under active consideration of Government and this Universities are likely to commence from the next academic year.

(*c*) Yes. Only in respect of Gulbarga University. But it is too early to take any dicision in this regard.

ಶ್ರೀ ಹೆಚ್. ಗಂಗಾಧರನ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇದು ಸರ್ಕಾರದ ಸಕ್ರಿಯ ಪರಿಶೀಲನೆಯಲ್ಲಿದೆ ಹಾಗೂ ಮುಂದಿನ ಶೈಕ್ಷಣಿಕ ಸಾಲಿನಿಂದ ಈ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸುವ ಸಂಭವವಿದೆ ಎಂದು ಹೇಳಿದ್ದೀರಿ. ಇದರಲ್ಲಿ ಏಕ ಸದಸ್ಯ ಆಯೋಗವನ್ನು ಬೇರೆ ಮಾಡಿದ್ದೀರಿ, ಆದರ ವರದಿ ಸಿದ್ಧವಾಗಿದೆಯೇ ? ಸಿದ್ಧವಾಗಿದ್ದರೆ ಅದನ್ನು ಸದನದ ಮುಂದಿಡುತ್ತೀರಾ ? ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಿಗೆ ಯಾವ ಯಾವ ಜಿಲ್ಲೆಗಳು ಬರುತ್ತವೆ. ಮತ್ತೆ ಎಷ್ಟೆಷ್ಟು ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳು ಸೇರುತ್ತವೆ ?

ಶ್ರೀ ಜಿ. ಬಿ. ಶಂಕರ್ ರಾವ್. – ಏಕ ಸದಸ್ಯ ಆಯೋಗದ ವರದಿ ಸರ್ಕಾರಕ್ಕೆ ಬಂದಿದೆ. On the basis of the report a draft Bill has already been prepared and it is under scrutiny. We also made financial provision to start Universities from next academic year. Then, hon. Member wanted to know about the jurisdiction of these Universities. So far as Mangalore University is concerned it comprises South Kanara and Kodagu districts and so far as Gulbarga University is concerned its jurisdiction cover four districts–Bellary, Bidar, Gulbarga and Raichur.

Another point which the hon. Member wanted to know was about the number of colleges coming under the jurisdiction of these two Universities. I request the hon. Member to put a separate question so that I can answer them.

ಶ್ರೀ ಹೆಚ್. ಗಂಗಾಧರಸ್. —ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರ ವಿಶ್ವವಿದ್ಯಾನಿಲಯ ಎಂದು ಹೆಸರಿಡಬೇಕೆಂದು ಮನವಿಗಳು ಬಂದಿವೆ ಎಂದು ಹೇಳಿದ್ದೀರಿ. ಆಂಧ್ರದಲ್ಲಿ ತಿರುಪತಿ ದೇವಸ್ಥಾನದವರು ವೆಂಕಟೇಶ್ವರ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದ್ದಾರೆ. ಅದೇ ರೀತಿ ನಮ್ಮ ಧರ್ಮಸ್ಥಳದವರು ಏನಾದರೂ ಮಂಗಳೂರು ವಿಶ್ವವಿದ್ಯಾನಿಲಯವನ್ನು ನಡೆಸುವ ಹೊಣೆ ಗಾರಿಕೆಯನ್ನು ಹೊರುವುದಾದರೆ ಅದಕ್ಕೆ ಮಂಜುನಾಥ ವಿಶ್ವವಿದ್ಯಾನಿಲಯ ಎಂದು ಹೆಸರು ಇಡುವುದಕ್ಕೆ ಏನು ತೊಂದರೆ ಇದೆ ? ಗುಲ್ಬರ್ಗದಲ್ಲಿ ಶರಣ ಬಸವೇಶ್ವರ ಮತ್ತು ಬಾಗಲಕೋಟೆ ವಿದ್ಯಾ ಸಂಸ್ಥೆಯವರು ಹತ್ತಾರು ಕಾಲೇಜುಗಳನ್ನು ಬಸವೇಶ್ವರರ ಹೆಸರಿನಲ್ಲಿ ನಡೆಸುತ್ತಿದ್ದಾರೆ. ಆದ್ದರಿಂದ, ಆ ರೀತಿ ಹೆಸರಿಟ್ಟು ಸಾರ್ವಜನಿಕರ ಮೇಲೆ ಹೊಣೆ ಬಿಟ್ಟು ಸರ್ಕಾರದ ವೆಚ್ಚವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಯೆ ?

ಶ್ರೀ ಜಿ. ಬಿ. ಶಂಕರ್ ರಾವ್.—ಆ ರೀತಿ ಬೇರೆ ಬೇರೆ ಸಲಹೆಗಳು ಬಂದಿವೆ, ಇಲ್ಲವೆಂದು ಅಲ್ಲ. ಅವನ್ನು ನಿರ್ಣಯ ತೆಗೆದುಕೊಳ್ಳುವ ಕಾಲದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಇದುವರೆಗೆ ಏನೂ ನಿರ್ಣಯ ತೆಗೆದುಕೊಂಡಿಲ್ಲ. ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಹೆಸರಿಡುವ ಬಗ್ಗೆ ೩–೪ ಸಲಹೆಗಳು ಬಂದಿವೆ. ಆದೇ ರೀತಿ ಮಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆಯೂ ಬಂದಿವೆ. ಎಷ್ಟರ ಮಟ್ಟಿಗೆ ಅದು ಸಾಧ್ಯವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿ ಸರ್ಕಾರ ನಿರ್ಣಯ ತೆಗೆದುಕೊಳ್ಳುವ ಕಾಲಕ್ಕೆ ಹೇಳಬಹುದು.

ಶ್ರೀ ಹೆಚ್ ಗಂಗಾಧರಸ್.—ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ನಿನಿಂದ, ಈಗ ಅದಕ್ಕೆ ಮಂಜೂರಾತಿ ಸಿಕ್ಕಿದೆ ಅಂದಮೇಲೆ ಒಂದೊಂದು ವಿಶ್ವವಿದ್ಯಾನಿಲಯಕ್ಕೂ ಆದರಿಂದ ಎಷ್ಟೆಷ್ಟು ಹಣ ಸಹಾಯ ಸಿಗಬಹುದು ?

ಶ್ರೀ ಜಿ. ಬಿ ಶಂಕರ ರಾವ್.—ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕಾದರೆ ಸರ್ಕಾರದವರು ಮನಸ್ಸು ಮಾಡಬೇಕಾಗುತ್ತದೆಯೇ ವಿನಹ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಮಾಡುವುದಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿ ಮತ್ತು ಕೆಲಸ ತೃಪ್ತಿಕರವಾಗಿದ್ದರೆ ಅವರು ಮನಸ್ಸು ಮಾಡಿ ಗ್ರಾಂಟ್ ಕೊಡುತ್ತಾರೆಯೇ ವಿನಹ ಪ್ರಾರಂಭದಲ್ಲೇ ಗ್ರಾಂಟ್ ಕೊಡುತ್ತಾರೆಂದು ಹೇಳುವ ಸಂದರ್ಭ ಇಲ್ಲ. ಒಟ್ಟಿನಲ್ಲಿ, ಸರ್ಕಾರ ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಣಯ ತೆಗೆದು ಕೊಂಡಿದೆಯಲ್ಲದೆ ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ಕೂಡ ಮಾಡಿಕೊಂಡಿದೆ.

Stoppage of Construction Work of Stadium at Mandya

325. SRI M. S ATHMANANDA (Mandya).—Will the Minister of State for Sericulture and Youth Services be pleased to state :—

(a) the reason for stopping the work of construction of Stadium at Mandya ;